ಎಂದೋ ಒಮ್ಮೆ ಬರುತ್ತದೆ. ಆ ಕ್ಷಣ ಯಾವಾಗ ಎನ್ನುವುದು ಕತೆಗಾರನಿಗೆ ಕೂಡ ಗೊತ್ತಿರುವುದಿಲ್ಲ. ಈ ಪ್ರತಿಮೆಗಳು ಬೆಳೆಯುತ್ತಾ ಕತೆಯಾಗುವ ಪರಿಯೇ ವಿಸ್ಮಯ.

ನನ್ನದೇ ಕೆಲವು ಕತೆಗಳನ್ನು ನೋಡುವುದಾದರೆ–

ಅಗಸ್ತ್ಯ: ನಾವು ಇದ್ದಿದ್ದು ಅಣುಶಕ್ತಿ ನಗರದಲ್ಲಿ. ಅಲ್ಲಿ ಈ ವಿಜ್ಞಾನದ ಮಾತುಕತೆಗಳು ಆಗುತ್ತಲೇ ಇರುತ್ತಿದ್ದವು. ಅವೆಲ್ಲ ಕಿವಿಮೇಲೆ ಬೀಳೋದು. ಹಾಗಾಗಿ, ಈ ವಿಜ್ಞಾನದ ವಿಷಯಗಳ ಬಗೆಗೂ ಆಸಕ್ತಿ ಹುಟ್ಟಿತು. ಅಲ್ಲಿನ ರಿಸರ್ಚ್ ಸೆಂಟರ್ ಲೈಬ್ರರಿಗೆ ರೆಫರೆನ್ಸ್‌ಗೆ ಕೂಡ ಹೋಗುತ್ತಿದ್ದೆ. 'ಅಗಸ್ತ್ಯ' ಕತೆ ಹುಟ್ಟಿದ್ದು ಇಂತಹ ಮಾತುಕತೆಯಲ್ಲಿ ಕೇಳಿಬಂದ ಕ್ಲೋನಿಂಗ್ ವಿಷಯದಿಂದ. ಆ ವಿಷಯ ನನ್ನೊಳಗೆ ಆಲೋಚನೆಗಳನ್ನು ಹುಟ್ಟುಹಾಕಿತು. ಹೀಗಾದ್ರೆ ಹೀಗಾಗಬಹುದು ಅಂತೆಲ್ಲ ಅನ್ನಿಸಿ ಆ ಕತೆ ಹುಟ್ಟಿತು. ಅದೇ ತರಹದ ವಿಜ್ಞಾನದ ವಿಷಯ ಇಟ್ಟುಕೊಂಡು ಒಂದೆರೆಡು ಕತೆ ಬರೆದೆ. ಇನ್ನೊಂದೆರೆಡು ಆ ತರಹದ ವಿಷಯಗಳ ಐಡಿಯಾ ಇತ್ತು. ಆದರೆ, ಆಮೇಲೆ ಬರೀಲಿಲ್ಲ.

ಸಿಂಧು, ಶೂ ಪಾಲಿಶ್ ಹುಡುಗ, ಅಪರಾಧಿ...: ಮುಂಬೈನಲ್ಲಿ ಕಾಣುತ್ತಿದ್ದ ಸೋಶಿಯಲ್ ಪ್ರಾಬ್ಲಂಗಳು ಆಮೇಲೆ ಮಕ್ಕಳ ಅನಾಥ ಆಶ್ರಮಕ್ಕೆ ಹೋಗುತ್ತಿದ್ದಾಗ ಕಂಡ ಅನುಭವಗಳು ಇವೆಲ್ಲವೂ ನನ್ನ ಮೊದಲ ಕತೆಗಳಾದವು. ಸಿಂಧು, ಶೂ ಪಾಲಿಶ್ ಹುಡುಗ, ಅಪರಾಧಿ ಈ ಕತೆಗಳೆಲ್ಲ ಹುಟ್ಟಿದ್ದು ಆ ಅನುಭವಗಳಿಂದ.

ದೇಹಾಂತ: ದೇಹಾಂತದಲ್ಲಿ ಒಂದು ಮುಖ್ಯ ಅಂಶವಿದೆ. ಅದೊಂದು ಅಚ್ಚರಿ ಹುಟ್ಟಿಸಿದ ವಿಷಯ. ಚಿಕ್ಕಂದಿನಲ್ಲಿ ಯಾರ ಜೊತೆಗೊ ಬಹಳ ಆತ್ಮೀಯವಾದ ಸಂಬಂಧ ಇಟ್ಟುಕೊಂಡಿರುತ್ತೇವೆ. ದೊಡ್ಡವರಾದ ಮೇಲೆ ಮದುವೆ, ಕೆಲಸ ಮತ್ತೊಂದು ಅಂತ ಅವರಿಂದ ದೂರವಾಗಿರ್ತಿವಿ. ಹೀಗೆ ಒಂದಷ್ಟು ವರ್ಷಗಳು ಕಳೆದುಹೋಗಿರುತ್ತವೆ. ಆಗೊಂದು ಸುದ್ದಿ ಬರುತ್ತೆ. ಅವರು ತೀರಿಕೊಂಡರು ಅಂತ. ಆಗ ನಮಗೆ ದುಃಖ ಹೆಚ್ಚಿಗೆ ಕಾಡದೆ ಹೋಗಬಹುದು. 'ನಮಗೆ ಅಷ್ಟೊಂದು ಆತ್ಮೀಯವಾಗಿದ್ದ ವ್ಯಕ್ತಿ ಸತ್ತುಹೋದರೂ ದುಃಖ ಆಗ್ತಿಲ್ವಲ್ಲ ಅಂತ ಆತಂಕ ಶುರುವಾಗುತ್ತೆ' ಈ ಆಲೋಚನೆಯ ಎಳೆ 'ದೇಹಾಂತ' ಬರೆಯೋಕೆ ಕಾರಣವಾಯಿತು. ಇದರ ಜೊತೆಗೆ ಮುಂಬೈ ಬದುಕು ಮನುಷ್ಯನ ಮೇಲೆ ಬೀರುವ ಪ್ರಭಾವ ಕೂಡ ಆ ಕತೆಯಲ್ಲಿ ಬಂದಿದೆ.

ಹಕ್ಕಿ: ಡಾರ್ಜಿಲಿಂಗ್‌ನ ಟೈಗರ್ ಹಿಲ್ಸ್‌ನಲ್ಲಿ ಸೂರ್ಯೋದಯ ನೋಡೋಕೆ ಹೋದಾಗ ಪುಟ್ಟಪುಟ್ಟ ಮಕ್ಕಳು ಬಣ್ಣಬಣ್ಣದ ಬಟ್ಟೆ ಹಾಕ್ಕೊಂಡು ಬಣ್ಣಬಣ್ಣದ ಫ್ಲಾಸ್ಕಿನಲ್ಲಿ ಟೀ ಹಿಡ್ಕೊಂಡು ಬಂದು 'ಆಂಟಿ ಚಾಯ್, ಅಂಕಲ್ ಚಾಯ್' ಅಂತ ಮಾರುತ್ತಾ ಇರುತ್ತಾರೆ. ಅಂತಹ ಹುಡುಗರನ್ನು ಅಲ್ಲಿಂದ ಕರ್ಕೊಂಡು ಬಂದು ಮುಂಬೈಯಲ್ಲಿ ಫ್ಲ್ಯಾಟುಗಳಲ್ಲಿ ಕೆಲಸಕ್ಕೆ ಇಟ್ಟುಕೊಂಡಿರುವುದನ್ನು ನೋಡಿದ್ದೆ. ಅಲ್ಲಿ ಪರ್ವತದ ತಪ್ಪಲಲ್ಲಿ ಓಡಾಡಿಕೊಂಡಿರುವ ಮಕ್ಕಳನ್ನ ಕರೆದುಕೊಂಡು ಬಂದು ಇಲ್ಲಿನ ಸಣ್ಣ ಫ್ಲ್ಯಾಟುಗಳಲ್ಲಿ ಇಡೋದು ಒಂಥರ ಅವರ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಹಾಗೆ ಅನ್ನಿಸಿತು. ಅಲ್ಲಿ ನೋಡಿದ್ದ ಆ ಮಕ್ಕಳ ಚಿತ್ರ ಕತೆಯಾಯಿತು.

ಹಾವಾಡಿಗ: ಚಿಕ್ಕಂದಿನಲ್ಲಿ ನಮ್ಮ ಮನೆಗಳ ಹತ್ತಿರ ಹಾವಾಡಿಗರು ಬರೋದನ್ನ ನೋಡಿದ್ದೆ. ಮುಂಬೈಗೆ ಹೋದಮೇಲೆ ಅವರನ್ನ ನೋಡೇ ಇರಲಿಲ್ಲ. ನಾಗರಪಂಚಮಿ ದಿವಸ ಪೂಜೆ ಮಾಡ್ತಾರೆ ಅಂತ ಅವರು